## ಹೀಗೂ ಇರುತ್ತದೆ!

★ ಕೆಲವು ಮಕ್ಕಳು ಶಾಲೆಯಲ್ಲಿ ಏನೇ ನಡೆದರೂ ಮನೆಯಲ್ಲಿ ಅದನ್ನು ಹೇಳಲ್ಲ. ಕೇಳಿದರೂ ಬಾಯಿ ಬಿಡುವುದಿಲ್ಲ. ಅದಕ್ಕಾಗಿ ಮಕ್ಕಳ ಜತೆ ಪೋಷಕರು 'ಗುಣಮಟ್ಟದ ಸಮಯ' ಕಳೆಯುವುದನ್ನು ಕಲಿಯಬೇಕು. ವಿವರವಾಗಿ ಎಲ್ಲವನ್ನೂ ಕೇಳಿಸಿಕೊಳ್ಳುವ ತಾಳ್ಮೆಯೂ ಬೇಕು.

★ ಮಕ್ಕಳಿಗೆ 'ಫ್ರೆಂಡ್ಸ್' ಅಂದ್ರೆ ಪಾಠಕ್ಕಿಂತ ಹೆಚ್ಚು! ಆದರೆ ಸ್ನೇಹಿತರನ್ನು ಮಾಡಿಕೊಳ್ಳುವುದು ಸುಲಭ ಕೌಶಲವಲ್ಲ. ಇದೂ ಅಪ್ಪ––ಅಮ್ಮ ಸಂಭ್ರಮಿಸಬೇಕಾದ ಕೌಶಲ. ಸುಮಾರು ೮ರಿಂದ ೧೦ ವರ್ಷದೊಳಗೆ ಸ್ನೇಹಿತರನ್ನು ಮಾಡಿಕೊಳ್ಳುವ ಈ ಸಾಮರ್ಥ್ಯ ಆರಂಭವಾಗುತ್ತದೆ. ಮನೋವೈಜ್ಞಾನಿಕವಾಗಿ "ನಾನು ಹೀಗೆ ಮಾಡುವುದರಿಂದ ಮತ್ತೊಬ್ಬರಿಗೆ ಏನನ್ನಿಸುತ್ತದೆ?" ಎಂಬ ಸೂಕ್ಷ್ಮಸಂವೇದನೆಯ ಆರಂಭ ಇದು.

★ ಮಕ್ಕಳು ಸ್ನೇಹಿತರನ್ನು ಆರಿಸುವಾಗ 'ಈತ /ಈಕೆಯೊಂದಿಗೆ ಸಂತಸದ ಸಮಯ ಸಾಧ್ಯವೇ? ನಮಗೆ ಸಮಾನವಾದ ಅಂಶಗಳಿವೆಯೆ, ಇವರನ್ನು ಎಷ್ಟು ನಂಬಬಹುದು' ಇತ್ಯಾದಿಯಾಗಿ ಒಂದು ಸುಪ್ತವಾದ ಮಾನಸಿಕ ಚೆಕ್‌ಲಿಸ್ಟ್ ಅನ್ನು ತಾವೇ ಗುರುತಿಸಿಕೊಳ್ಳುತ್ತಾರೆ!

★ ಸಹಪಾಠಿಗಳೇ ಒಬ್ಬರಿಗೊಬ್ಬರು ಕಲಿಸುವುದು, ಆಪ್ತಸಲಹೆ ನೀಡುವುದು – ಸಂಶೋಧನೆಗಳ ಪ್ರಕಾರ ಬಹು ಉಪಯುಕ್ತ.

ದೃಷ್ಟಿಯಿಂದ ನೋಡುತ್ತಾರೆ, ಅಳೆಯುತ್ತಾರೆ. ಆತಂಕಕ್ಕೆ ಒಳಗಾಗುತ್ತಾರೆ.

ನಮ್ಮಲ್ಲಿ ಯಾವ ಕಲಿಕೆ, ಶಕ್ತಿ– ಮತ್ತು ಸ್ಫೂರ್ತಿಗಳನ್ನು ತುಂಬುತ್ತದೆಯೋ ಆ ವಿಷಯ ನಮಗೆ ಬೇಸರ ತರಲಾರದು. ಸಹಜವಾಗಿ ಅಂತಹ ವಿಷಯದ ಬಗೆಗೆ ನಮ್ಮಲ್ಲಿ ಪ್ರೀತಿಯೂ ಬೆಳೆಯುತ್ತದೆ. ಆಗ ಗಂಟೆಗಳು ನಿಮಿಷಗಳಾಗುತ್ತವೆ. ದಿನಗಳು ಬಹು ಬೇಗ ಕಳೆಯುತ್ತವೆ. ವಿಷಯ ನಮಗೆ ಹೊರೆಯಾದರೆ, ಅರ್ಥವಾಗದಿದ್ದರೆ, ವೈವಿಧ್ಯವಿರದಿದ್ದರೆ ಮಿದುಳಿಗೆ ದಣಿವಾಗುತ್ತದೆ. ಶಿಕ್ಷಣವನ್ನು ಕಡ್ಡಾಯ ಮಾಡಲು ಸರ್ಕಾರ ಎಷ್ಟೇ ಕ್ರಮಗಳನ್ನು ಕೈಗೊಂಡರೂ, ಮಧ್ಯಾಹ್ನ ಊಟ ನೀಡಿದರೂ ಶಿಕ್ಷಣದಲ್ಲಿ ಏಕತಾನತೆಯನ್ನು ಬದಲಿಸದಿದ್ದರೆ ಮಕ್ಕಳು ಶಿಕ್ಷಣವನ್ನು ಮುಂದುವರೆಸುವುದಿಲ್ಲ.

ನಮ್ಮ ಮಿದುಳು ಯಾವುದನ್ನೇ ಆದರೂ ಗ್ರಹಿಸುವುದು ಅದು ತನ್ನನ್ನು ಪ್ರಚೋದಿಸುವಂತಿದ್ದರೆ ಮಾತ್ರ. ಏಕತಾನತೆಯ ಕಲಿಸುವ ಕ್ರಮಗಳು ನಮ್ಮ ಕಾದಾಡು, ಪಾರಾಗು, ಸುಮ್ಮನಾಗು – ಎಂಬ ಪ್ರತಿಕ್ರಿಯೆಗಳನ್ನು ಮಕ್ಕಳಲ್ಲಿ ಹೊರತರುತ್ತದೆ.

ಇಂದಿನ ಶಿಕ್ಷಣ ಕ್ರಮವನ್ನು ಇಟ್ಟುಕೊಂಡೇ ನಿಮ್ಮ ಮಕ್ಕಳಲ್ಲಿ ಕಲಿಕೆಯ ಆನಂದವನ್ನು ತರಲು ಸಾಧ್ಯವಿದೆ. ಅದಕ್ಕೆ ಬೇಕಾದ್ದು ಅಪ್ಪ– ಅಮ್ಮಂದಿರಿಗೆ ಸ್ವಲ್ಪ ಸಮಯ, ಪ್ರಯೋಗಗಳನ್ನು ಮಾಡುವ ಮನಸ್ಸು ಮತ್ತು ಬಹಳಷ್ಟು ತಾಳ್ಮೆ. ಕಥೆಗಳು, ಆಟಗಳು, ತಮ್ಮ ಬಾಲ್ಯದ ಕುರಿತ ಚರ್ಚೆಗಳು ಶಾಲೆಯ ಅನುಭವ ಕಲಿಕೆಯ ಪಠ್ಯಗಳೊಂದಿಗೆ ಹೊಂದಿಕೊಂಡಾಗ ಮಕ್ಕಳ ಆತ್ಮವಿಶ್ವಾಸವೂ ಮೇಲೇರುತ್ತದೆ. ಅಂಕಗಳಿಕೆಯೊಂದಿಗೆ, ಇತರ


Our Faculty Our Strength

BOSCOSS
TUTORIALS

SUMMER VACATION CLASSES
II PUC Syllabus Coaching for Science Students (PCMB) for Local and Outstation students.

JEE-M / CET / NEET-2018 CRASH COURSE
- Intensive Coaching for 9 days commencing from 9th to 17th October 2017 and will continue after II PUC / Class XII Annual Exam in March 2018.

OR

- Intensive Coaching for 25 days commencing immediately after II PUC / Class XII Annual Exam in March 2018.

ADMISSIONS OPEN

PROGRAMMES
- I PU and XI Classes Syllabus Coaching Classes in PCMB from June to January.
- II PU and XII Classes Syllabus Coaching in PCMB;
  (a) during holidays from March to May and in October.
  (b) during holidays from March to May and then from June to December.
- Summer Vacation Syllabus Coaching in PCMB for II PU & Class XII from March to May out-station students.
- Regular NEET / JEE / CET Coaching
- NEET / JEE / CET CRASH COURSE in April.
- IX Std. & X Std. CBSE / STATE Syllabus Maths & Science.

III & IV Floor, Essel Centre,
M. G. Road, Mangaluru - 575 003
0824 - 2494537, 4272728
4272729, 99724 58537
www.boscoss.com

BOSCOSS - Learn from the Masters